


| ರಿಯೊ ಒಲಿಂಪಿಕ್ಸ್‌ಗೆ 8 ಕನ್ನಡಿಗರು | |
|---|---|
| ಶೂಟಿಂಗ್ | ಪ್ರಕಾಶ್ ನಂಜಪ್ಪ |
| ಟೆನಿಸ್ ಡಬಲ್ಸ್ | ಅಶ್ವಿನಿ ಪೊನ್ನಪ್ಪ |
| ಹಾಕಿ | ಎಸ್.ವಿ.ಸುನಿಲ್, ವಿ.ಆರ್.ರಘುನಾಥ್, ನಿಕ್ಕಿನ್ ತಿಮ್ಮಯ್ಯ, ಕೆ.ಉತ್ತಪ್ಪ |
| ಡಿಸ್ಕಸ್ ಥ್ರೋ | ವಿಕಾಸ್ ಗೌಡ |
| ಮಹಿಳೆಯರ ರಿಲೆ | ಎಂ.ಆರ್. ಪೂವಮ್ಮ |

ಅಶ್ವಿನಿ ಪೊನ್ನಪ್ಪ ಮತ್ತು ಜ್ವಾಲಾ ಗುಟ್ಟಾ        **ಚಿತ್ರ: ಕೆ.ಎನ್.ಶಾಂತಕುಮಾರ್**

ಅಥ್ಲೆಟಿಕ್ಸ್ ವಿಭಾಗದವರದ್ದೇ ಸಿಂಹಪಾಲು.

17 ಮಂದಿ ಮಹಿಳೆಯರೂ ಸೇರಿದಂತೆ ಒಟ್ಟು 36 ಅಥ್ಲೀಟ್‌ಗಳು ಟ್ರ್ಯಾಕ್ ಆ್ಯಂಡ್ ಫೀಲ್ಡ್ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಮಿಲ್ಖಾ ಸಿಂಗ್, ಬಹಾದ್ದೂರ್ ಸಿಂಗ್, ಕೆನೆತ್ ಪೊವೆಲ್ ಅವರಂತಹ ಖ್ಯಾತನಾಮ ಅಥ್ಲೀಟ್‌ಗಳು ಇದ್ದ ಕಾಲದಿಂದಲೂ ಅಥ್ಲೆಟಿಕ್ಸ್‌ನಲ್ಲಿ ಪದಕ ಸಾಧನೆ ಮಾಡಲು ಭಾರತಕ್ಕೆ ಸಾಧ್ಯವಾಗಿಲ್ಲ.

ಹೋದ ವರ್ಷ ಮೈಸೂರು ಮೂಲದ ವಿಕಾಸಗೌಡ ಡಿಸ್ಕಸ್ ಥ್ರೋನಲ್ಲಿ ಪದಕದ ಸನಿಹ ಹೋಗಿದ್ದರು. ಫೈನಲ್‌ನಲ್ಲಿ 64.79 ಮೀಟರ್ಸ್ ದೂರ ಡಿಸ್ಕಸ್ ಎಸೆದಿದ್ದ ವಿಕಾಸ್ ಎಂಟನೇ ಸ್ಥಾನ ಪಡೆದಿದ್ದರು.

ಜರ್ಮನಿಯ ರಾಬರ್ಟ್ ಹಾರ್ಟಿಂಗ್ (68.27ಮೀ), ಇರಾನಿನ ಎಹಸಾನ್ ಹದ್ದದಿ (68.18ಮೀ) ಮತ್ತು ಎಸ್ಟೋನಿಯಾದ ಜರ್ಡ್ ಕಂಟರ್ (68.03ಮೀ) ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದಿದ್ದರು.

ಹೋದ ವರ್ಷ ವುಹಾನ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 33 ವರ್ಷದ ವಿಕಾಸ್ 62.03 ಮೀಟರ್ಸ್ ಡಿಸ್ಕಸ್ ಎಸೆದು ಚಿನ್ನದ ಪದಕ ಜಯಿಸಿದ್ದರು. ಅಮೆರಿಕದಲ್ಲಿ ನೆಲೆಸಿ ತರಬೇತಿ ಪಡೆಯುತ್ತಿರುವ ವಿಕಾಸ್ ಗೌಡ ಅವರು ರಿಯೊದಲ್ಲಿ ಚಿನ್ನ ಗೆಲ್ಲಬೇಕಾದರೆ ತಮ್ಮ ಸಾಮರ್ಥ್ಯ ಮೀರಿ ತೋಳ್ಬಲ ಪ್ರದರ್ಶಿಸಬೇಕಿದೆ. 70 ಮೀಟರ್ಸ್ ಗಿಂತಲೂ ಹೆಚ್ಚು ದೂರ ಎಸೆಯುವ ಜರ್ಮನಿ, ಅಮೆರಿಕ ಅಥ್ಲೀಟ್‌ಗಳು ಸ್ಪರ್ಧೆಯಲ್ಲಿರುವುದು ವಿಕಾಸ್‌ಗೆ ಕಠಿಣ ಪೈಪೋಟಿ ಇದೆ.

ಶಾಟ್‌ಪಟ್‌ನಲ್ಲಿ ಇಂದರ್‌ಜೀತ್ ಸಿಂಗ್, ಟ್ರಿಪಲ್ ಜಂಪ್‌ನಲ್ಲಿ ಸ್ಪರ್ಧಿಸಲಿರುವ ರಂಜೀತ್ ಮಹೇಶ್ವರಿ, ಲಾಂಗ್ ಜಂಪ್‌ನಲ್ಲಿ ಅಂಕಿತ್ ಶರ್ಮಾ ಅವರಿಗೂ ಪದಕ ಗಳಿಸುವುದು ಕಠಿಣ ಸವಾಲು. ಕೇರಳದ ರಂಜೀತ್ 17.30 ಮೀಟರ್ ಜಂಪ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.

ಲಂಡನ್ ಒಲಿಂಪಿಕ್ಸ್ ಟ್ರಿಪಲ್ ಜಂಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಜೋನಾಥನ್ ಎಡ್ವರ್ಡ್ 18.29 ಮೀಟರ್ಸ್ ಜಿಗಿದು ದಾಖಲೆ ಮಾಡಿದ್ದರು. ಅಂದರೆ ರಂಜೀತ್ ಅವರು ಕನಿಷ್ಠ 19 ಮೀಟರ್‌ಗಿಂತಲೂ ಹೆಚ್ಚು ದೂರ ಜಿಗಿದರೆ ಪದಕಕ್ಕೆ ಪೈಪೋಟಿಯೊಡ್ಡಬಹುದು.

ಟ್ರ್ಯಾಕ್‌ನಲ್ಲಿ ಧರ್ಮವೀರ್ ಸಿಂಗ್ (200 ಮೀ), ಮೊಹಮ್ಮದ್ ಅನಾಸ್ (400ಮೀ), ಜಿನ್ಸನ್ ಜಾನ್ಸನ್ (800ಮೀ), ತೊಂಕಲ್ ಗೋಪಿ, ಕೇತಾರಾಮ್, ನಿತೇಂದರ್ ಸಿಂಗ್ ರಾವುತ್ (ಮ್ಯಾರಥಾನ್), ಬಲ್ಜಿಂದರ್

## ಜಿಮ್ನಾಸ್ಟಿಕ್ಸ್‌ನ ಆಶಾದೀಪ

‘ರಿಯೊನಲ್ಲಿ ನನ್ನ ಮೊದಲ ಗುರಿ ಫೈನಲ್ ತಲುಪುವುದು’– ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಭಾರತದ ಮೊಟ್ಟಮೊದಲ ಮಹಿಳಾ ಜಿಮ್ನಾಸ್ಟ್ ದೀಪಾ ಕರ್ಮಾಕರ್ ಅವರ ಆತ್ಮವಿಶ್ವಾಸದ ನುಡಿಗಳಿವು.

ತ್ರಿಪುರ ರಾಜ್ಯದ 22 ವರ್ಷದ ದೀಪಾ ಹೋದ ಏಪ್ರಿಲ್‌ನಲ್ಲಿ ಇಡೀ ದೇಶದ ಗಮನವನ್ನು ತಮ್ಮತ್ತ ಸೆಳೆದಿದ್ದರು. ರಿಯೊದಲ್ಲಿಯೇ ನಡೆದಿದ್ದ ಅರ್ಹತಾ ಸುತ್ತಿನಲ್ಲಿ ವಾಲ್ಟ್‌ನಲ್ಲಿ ಅವರು ಅರ್ಹತೆ ಪಡೆದುಕೊಂಡಿದ್ದರು.

ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಭಾರತದ ಪುರುಷ ಸ್ಪರ್ಧಿಗಳು ಭಾಗವಹಿಸಿಯೇ ಐದು ದಶಕಗಳೇ ಕಳೆದುಹೋಗಿವೆ. ಅಂತಹದ್ದರಲ್ಲಿ ದೀಪಾ ಅವರು ಭಾರತದ ಪದಕ ಗಳಿಕೆಯ ಸಾಧ್ಯತೆಯನ್ನು ಮತ್ತೊಂದು ಕ್ರೀಡೆಗೆ ವಿಸ್ತರಿಸಿರುವುದು ವಿಶೇಷ.